**<u>ನ್ಯಾಯಾಲಯದ ಆದೇಶದ ಮೇರೆಗೆ ಸಾಕ್ಷಿಯನ್ನು ದಿನಾಂಕ *31.07.2025* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತುಃ</u>**

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>**

ಚುಂಚನಹಳ್ಳಿಯಿಂದ ಮರಹಳ್ಳಿಪುರಕ್ಕೆ ಸುಮಾರು 8 ಕಿ.ಮೀಟರ್ ಅಂತರ ಇರುತ್ತದೆ. ನನಗೆ ಮೃತ ಪರಶಿವಪ್ಪ ತುಂಬಾ ವರ್ಷಗಳಿಂದ ಪರಿಚಯ ಇದ್ದರು. ನಾನು ಮೃತ ಪರಶಿವಪ್ಪನ ಮೊಮ್ಮಗಳನ್ನು ಮದುವೆಯಾಗಿರುತ್ತೇನೆ. ಪರಶಿವಪ್ಪನಿಗೆ ಹೊಡೆದಿರುತ್ತಾರೆ ಎಂದು ನನಗೆ 5.45 ಗಂಟೆಗೆ ಗೊತ್ತಾಗಿತ್ತು. ನಾನು ಆ ದಿವಸ ಬೆಳಗ್ಗೆ 9.00 ಗಂಟೆ ಸುಮಾರಿಗೆ ಚುಂಚನಹಳ್ಳಿಗೆ ಒಬ್ಬ ಹೆಣ್ಣು ಮಗಳು ಮರಣ ಹೊಂದಿದ್ದರಿಂದ ನೋಡಲು ಬಂದಿದ್ದರು. ಅಲ್ಲಿ ಸುಮಾರು 1 ಗಂಟೆಯವರೆಗೆ ಪರಶಿವಪ್ಪ ಇದ್ದರು. ಘಟನೆಯಾಗುವ ಪೂರ್ವದ 15 ದಿವಸ ಮುಂಚೆ ನನ್ನನ್ನು ಜಮೀನಿನಲ್ಲಿ ಉಳುಮೆ ಮಾಡಿಸುವ ಸಲುವಾಗಿ ಕರೆದುಕೊಂಡು ಹೋಗಿದ್ದರು. ಜಮೀನನ್ನು ಉಳುಮೆ ಮಾಡಿಸುವ ದಿವಸ ನಾನು, ಪರಶಿವಪ್ಪ ಮತ್ತು ಟ್ರಾಕ್ಟರ್ ಚಾಲಕ ಇದ್ದೆವು. ನಾನು ಜಮೀನಿನ ಉಳುಮೆ ಮಾಡಿಸುವ ಸಲುವಾಗಿ ಹೋಗಿದ್ದನ್ನು ಬಿಟ್ಟರೆಘಟನೆಯಾಗಿತ್ತು ಎಂದು ಹೇಳಿದ ನಂತರ ಹೋಗಿದ್ದೆ. ಟ್ರಾಕ್ಟರ್ ಉಳುಮೆ ಮಾಡಿಸುವ ದಿವಸ ಯಾವುದೇ ಜಗಳ ಆಗಿರಲಿಲ್ಲ. ಮೃತ ಪರಶಿವಪ್ಪನಿಗೂ ಮತ್ತು 1 ನೇ ಆರೋಪಿತನಿಗೂ ಜಗಳ ಆಗಿದ್ದನ್ನು ನಾನು ಪ್ರತ್ಯಕ್ಷವಾಗಿ ನೋಡಿರುವುದಿಲ್ಲ. ನಾನು ಆ ದಿವಸ ವರ್ತಮಾನ ತಿಳಿದು ಮರಹಳ್ಳಿಪುರಕ್ಕೆ ಹೋಗಿರಲಿಲ್ಲ ನೇರವಾಗಿ ಮಿಷನ್ ಆಸ್ಪತ್ರೆಗೆ ಹೋಗಿದ್ದೆ. ಮಿಷನ್ ಆಸ್ಪತ್ರೆಯಲ್ಲಿ ಪರಶಿವಪ್ಪ ಮಧ್ಯರಾತ್ರಿ 1.10 ಗಂಟೆಗೆ ಮರಣ ಹೊಂದಿದ್ದ. ಮೈಸೂರಿನ ಮೆಡಿಕಲ್ ಕಾಲೇಜಿನಲ್ಲಿ ಶವ ಪರೀಕ್ಷೆ ಮಾಡಿದ್ದರು ಅಲ್ಲಿವರೆಗೂ ನಾನು ಅಲ್ಲಿಯೇ ಇದ್ದೆ. ನಾನು ಪೊಲೀಸರಿಗೆ ಫೋನ್ ಮಾಡಿದ್ದೆ ಮಧ್ಯರಾತ್ರಿ 2.00 ಗಂಟೆ ಸುಮಾರಿಗೆ ಇನ್ಸ್ ಪೆಕ್ಟರ್ ಆಸ್ಪತ್ರೆಗೆ ಬಂದಿದ್ದರು. ಆಗ ಆಸ್ಪತ್ರೆಯಲ್ಲಿ ನಾನು, ಪರಶಿವಪ್ಪನ

ಇಬ್ಬರು ಹೆಣ್ಣು ಮಕ್ಕಳು, ಅಳಿಯಂದಿರು, ಬಾಮೈದ ಇದ್ದರು. ಪೊಲೀಸರು ಘಟನೆ ಬಗ್ಗೆ ನಮ್ಮನ್ನು ವಿಚಾರಣೆ ಮಾಡಿದ್ದರು. ಮಹದೇವಮ್ಮ ಮಿಷನ್ ಆಸ್ಪತ್ರೆಯಲ್ಲಿ ಇದ್ದು ಮೈಸೂರಿನ ಮೆಡಿಕಲ್ ಕಾಲೇಜಿನಲ್ಲಿ ಶವ ಪಂಚನಾಮೆ ಮಾಡುವ ವೇಳೆಯಲ್ಲಿ ಊರಿಗೆ ಹೋಗಿದ್ದರು. ಪರಶಿವಪ್ಪ ರಾಜಕೀಯದಲ್ಲಿ ಇದ್ದುದರಿಂದ ಬೇರೆ ಬೇರೆ ಗ್ರಾಮಗಳಿಗೆ ಹೋಗುತ್ತಿದ್ದರು ಅವರಿಗೆ ವಿರೋದಿಗಳು ಇದ್ದರು ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ ಆದರೆ ಸ್ನೇಹಿತರು ಇದ್ದರು. ವರುಣಾ ಕ್ಷೇತ್ರದಲ್ಲಿ ರಾಜಕೀಯವಾಗಿ ಎರಡು ಗುಂಪುಗಳು ಇರುತ್ತವೆ ಎಂದರೆ ಸರಿ. ನಾನು ಮತ್ತು ಪರಶಿವಪ್ಪ ಬಿ.ಜೆ.ಪಿ. ಪಕ್ಷಕ್ಕೆ ಸೇರಿದವರು ಇರುತ್ತೇವೆ. ನನಗೆ ಸ್ಥಳಕ್ಕೆ ಬರುವಂತೆ ಪೊಲೀಸರು ಚುಂಚನಹಳ್ಳಿಯಲ್ಲಿ ನೊಟೀಸ್ ಕೊಟ್ಟಿದ್ದರು. ನನಗೆ ಫೋನ್ ಮಾಡಿ ಬರುವಂತೆ ತಿಳಿಸಿದ್ದರು. ಮರಹಳ್ಳಿಪುರದಲ್ಲಿ ಪರಶಿವಪ್ಪನಿಗೆ ಬೇಕಾದವರು ಸಾಕಷ್ಟು ಜನ ಇರುತ್ತಾರೆ ಎಂದರೆ ಸರಿ. ಮಹಜರ್ ಗೆ ಜಾಗವನ್ನು ಮಹೇಶ್ ತೋರಿಸಿದ್ದ. ಕಡಿದ ಮರಗಳು ಏರಿಯ ಮೇಲೆ ಬಿದ್ದಿದ್ದವು ಎಂದರೆ ಸರಿಯಲ್ಲ ಆದರೆ ಕಡಿದ ಮರದ ಬುಡಗಳು ಏರಿಯ ಮೇಲೆ ಇದ್ದವು ಮರ ಜಮೀನಿಗೆ ಬಿದ್ದಿತ್ತು. ಮಹಜರ್ ಮಾಡುವ ವೇಳೆಯಲ್ಲಿ ಮಹದೇವಮ್ಮ ಬಂದಿರಲಿಲ್ಲ. ನಾನು ಮಹಜರ್ ಮಾಡುವ ವೇಳೆಯಲ್ಲಿ ನಾನು ಇರಲಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಹಜರ್ ಅನ್ನು ಪೊಲೀಸ್ ಠಾಣೆಯಲ್ಲಿ ಬರೆದಿದ್ದರು ಎಂದರೆ ಸರಿಯಲ್ಲ. ನಾನು ಪರಶಿವಪ್ಪ ನ ಕುಟುಂಬಕ್ಕೆ ಬೇಕಾದವನು ಇರುವುದರಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ– ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
**ಮೈಸೂರು**